ಶ್ರೀ ಎಂ. ರಘುಪತಿ.--ಮಾನ್ಯ ಸದಸ್ಯರಿಗೆ ಹೇಳಬೇಕಾದರೆ ಸಚಿವ ಸಂಪುಟದಲ್ಲಿ ಈ ಬಗ್ಗೆ ಏನು ನಿರ್ಧಾರ ಮಾಡಿದರು ಅದು ಅನೌಪಚಾರಿಕ ನಿರ್ಧಾರ, ಆದರೆ ಅದರ ಬಗ್ಗೆ ಸರ್ಕಾರೀ ಆಜ್ಞೆಯನ್ನು ಹೊರಡಿಸಲಿಲ್ಲ ಅಷ್ಟೆ.

ಶ್ರೀ ಕೆ. ಹೆಚ್., ಶ್ರೀನಿವಾಸ್.--ನೀವು ಆ ಆಜ್ಞೆಯನ್ನು ಹೊರಡಿಸಬಹುದಾಗಿತ್ತಲ್ಲ.

ಶ್ರೀ ಎಂ. ರಘುಪತಿ.—ಹಿಂದೆ ನಡೆದುದ್ದು ನಾನು ಹೇಳುತ್ತೇನೆ.

ಶ್ರೀ ಬಸವಣ್ಣಗೌಡ.—ಕಳೆದ ವರ್ಷ ಈ ಸಹ್ಯಾದ್ರಿ ವಿಶ್ವವಿದ್ಯಾನಿಲಯದ ಸ್ಥಾಪನೆ ಬಗ್ಗೆ ಒಂದು ಪ್ರಶ್ನೆ ಹಾಕಿದರೆ ಇದೇ ರೀತಿ ಉತ್ತರ ಕೊಟ್ಟಿದ್ದಿರಿ. ಆದುದರಿಂದ ಈಗಲಾದರೂ ಕೂಡ ಶಿವಮೊಗ್ಗದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಎಂ. ರಘುಪತಿ.—ತಮಗೆ ಹೇಳಬೇಕಾದರೆ, ನನ್ನ ಇಲಾಖೆಯಲ್ಲಿ ಈ ವರ್ಷ ಹಣಕಾಸಿನ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲ. ಕಾರಣ ಯು.ಜಿ.ಸಿ ಯಿಂದ ಈ ವಿಚಾರ ಕ್ಲಿಯರ್ ಆದ ತಕ್ಷಣ ಆಮೇಲೆತ್ತೇ ಆದರ ಬಗ್ಗೆ ಸರ್ಕಾರಿ ಆಜ್ಞೆಯೊಂದನ್ನು ಹೊರಡಿಸುತ್ತೇನೆ. ಅನಂತರ ಅಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪನೆ ಮಾಡುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ : ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ರಜೆ ಪ್ರಯಾಣ ರಿಯಾಯಿತಿ ಸೌಲಭ್ಯ ಪಡೆದಿರುವಿಕೆ.

ಪ್ರಶ್ನೆ 40 (98) ಶ್ರೀ ಎಂ. ರಾಮಪ್ಪ (ಬಳ್ಳಾರಿ),ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿ ಜಿಲ್ಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಅಧ್ಯಾಪಕರು ಮತ್ತು ನೌಕರರಲ್ಲಿ ಎಷ್ಟು ಜನರು ರಜಾ ಪ್ರವಾಸ ಸೌಲಭ್ಯ ಮುಂಗಡ ಹಣ ಪಡೆದಿರುತ್ತಾರೆ ;

ಆ) ಮಂಜೂರು ಮಾಡಿದ ಮತ್ತು ಸಂದಾಯ ಮಾಡಿದ ಹಣವೆಷ್ಟು ;

ಇ) ಬಳ್ಳಾರಿ ಜಿಲ್ಲೆಯಲ್ಲಿ ಮುಂಗಡ ಹಣ ಮಂಜೂರು ಮಾಡುವಾಗ ಮತ್ತು ಸಂದಾಯವಾಗುವಾಗ ಏನಾದರೂ ಅಕ್ರಮ ನಡೆದಿರುವುದೇ ಮುಂಗಡ ಹಣದ ದುರುಪಯೋಗವಾಗಿದೆಯೇ ;

ಈ) ಹಾಗಿದ್ದಲ್ಲಿ ಅಕ್ರಮವಾಗಿ ಮುಂಗಡ ಹಣದ ಮಂಜೂರಾತಿ ಹಾಗೂ ಸಂದಾಯಕ್ಕೆ ಜವಾಬ್ದಾರರಾದ ನೌಕರರು ಯಾರು ಮತ್ತು ಸರ್ಕಾರ ಅವರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಿದೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) 1979-80ರಿಂದ 1983-84ರ ವರೆಗಿನ ಅವಧಿಯಲ್ಲಿ ಒಟ್ಟು 2141 ಜನ ಸಿಬ್ಬಂದಿ ವರ್ಗಕ್ಕೆ ರಜಾ ಪ್ರವಾಸ ಸೌಲಭ್ಯ ಮಂಜೂರಾಗಿರುತ್ತದೆ.

ಆ) 1. ಮಂಜೂರು ಮಾಡಿದ ಹಣ ರೂ. 56,06,133
2. ಸಂದಾಯ ಮಾಡಿದ ಹಣ ರೂ. 51,07,622

ಇ) ಮುಂಗಡ ಹಣ ಮಂಜೂರು ಮಾಡುವಾಗ ಹಾಗೂ ಸಂದಾಯ ಮಾಡುವಾಗ ಕೆಲವು ಅಕ್ರಮಗಳು ಮತ್ತು ಮುಂಗಡ ಹಣದ ದುರುಪಯೋಗವಾಗಿರುವುದು ಕಂಡುಬಂದಿದೆ.

ಈ) ಈ ವಿಷಯದ ಬಗ್ಗೆ ತನಿಖೆ ನಡೆಯುತ್ತಿದೆ. ತನಿಖೆ ಪೂರ್ಣಗೊಂಡ ನಂತರವೇ ಅಕ್ರಮಗಳಿಗೆ ಕಾರಣರಾದ ಅಧಿಕಾರಿಗಳು ಯಾರು ಎಂದು ಗೊತ್ತಾಗುವುದು. ಆನಂತರ ಅಕ್ರಮಗಳಿಗೆ ಜವಾಬ್ದಾರರೆಂದು ಕಂಡುಬಂದ ವ್ಯಕ್ತಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ರಾಮಪ್ಪ —ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯ ಈ)ಗೆ ಉತ್ತರವಾಗಿ ಈ ವಿಷಯದ ಬಗ್ಗೆ ತನಿಖೆ ನಡೆಯುತ್ತಿದೆ. ತನಿಖೆ ಪೂರ್ಣಗೊಂಡ ನಂತರವೇ ಅಕ್ರಮಗಳಿಗೆ ಕಾರಣರಾದ ಅಧಿಕಾರಿಗಳು ಯಾರು ಎಂದು ಗೊತ್ತಾಗುವುದು, ಆನಂತರ ಅಕ್ರಮಗಳಿಗೆ ಜವಾಬ್ದಾರರೆಂದು ಕಂಡುಬಂದ ವ್ಯಕ್ತಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದೀರಿ. ಇದು ಇಷ್ಟು ದಿನದೊಳಗೆ ಅಥವಾ ಇಷ್ಟು ವರ್ಷದೊಳಗೆ ಮುಗಿಯಬೇಕೆಂದು ಏನಾದರೂ ನಿಗದಿ ಮಾಡಿದ್ದೀರಾ? ಸಾಮಾನ್ಯವಾಗಿ ಪ್ರವಾಸ ಮುಗಿಸಿಕೊಂಡು ಬಂದಮೇಲೆ ಒಂದು ತಿಂಗಳೊಳಗೆ ಅವರು ಸಂಬಂಧಪಟ್ಟ ದಾಖಲಾತಿಗಳನ್ನು ಕೊಡಬೇಕು. ನಂತರ ಅದನ್ನು ಚೆಕ್ ಮಾಡಿ ಬಿಲ್‌ಮಾಡಿ ಸ್ಯಾಂಕ್ಷನ್ ತೆಗೆದುಕೊಂಡು ಹಣ ಪಾವತಿ ಮಾಡಬೇಕು. ಇಲ್ಲಿ ಏನಾಗಿದೆ ಎಂದರೆ ಈ ಮುಂಗಡ ಹಣ ಮಂಜೂರು ಮಾಡುವಾಗ ಹಾಗೂ ಸಂದಾಯ ಮಾಡುವಾಗ ಕೆಲವು ಅಕ್ರಮಗಳಾಗಿ ಹಣ ದುರುಪಯೋಗವಾಗಿದ್ದರೂ ಕೂಡ ಈವೊತ್ತಿನ ವರೆಗೂ ಅವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ನಾವು ಇದನ್ನು ವರ್ಷೇ ವರ್ಷೇ ಕೇಳಿಕೊಂಡೇ

ಬರುತ್ತಿದ್ದೇವೆ, ಪತ್ರ ಬರೆಯುತ್ತಲೇ ಇದ್ದೇವೆ : ಆದರೆ ಇದರ ಬಗ್ಗೆ ಸರಿಯಾದ ಕಾರ್ಯಕ್ರಮ ಏನು ತೆಗೆದುಕೊಂಡಿದ್ದಾರೆ ಅನ್ನುವುದನ್ನು ಇದುವರೆಗೂ ತಿಳಿಸಿಲ್ಲ. ಈಗಲಾದರೂ ತಿಳಿಸುತ್ತೀರಾ ?

ಶ್ರೀ ಎಂ. ರಘುಪತಿ,—ಇದನ್ನು ಪೋಲೀಸ್ ಎನ್‌ಕ್ವೈರಿ ಮಾಡಬೇಕು ಎಂದು ತಿಳಿಸಿದಾಗ ಅವರು ನಮಗೆ ಈಗಾಗಲೇ 4 ಸಾವಿರ ಕೇಸುಗಳು ಇರುವುದರಿಂದ ಇದು ಸಾಧ್ಯವಿಲ್ಲ ಎಂದು ತಿಳಿಸಿದರು. ಆದುದರಿಂದ ಈಗ ಆದನ್ನು ಕೈಬಿಟ್ಟು ನಮ್ಮ ಇಲಾಖೆಯಲ್ಲೇ ಒಬ್ಬ ಹಿರಿಯ ಉತ್ತಮವಾದ ಅಧಿಕಾರಿಗಳನ್ನು ನೇಮಕ ಮಾಡಿ ಅವರಿಂದ ಎನ್‌ಕ್ವೈರಿ ಆಗುವ ಹಾಗೆ ಮಾಡಿಸುತ್ತೇವೆ. ಈ ಬಗ್ಗೆ ಇನ್ನು 3–4 ದಿವಸದಲ್ಲೇ ಆಜ್ಞೆಯನ್ನು ಹೊರಡಿಸುತ್ತೇವೆ.

ಶ್ರೀ ಎಂ. ರಾಮಪ್ಪ.—ಎಷ್ಟು ದಿನದೊಳಗೆ ರಿಪೋರ್ಟ್ ಕೊಡುತ್ತಾರೆ ಅನ್ನುವುದನ್ನು ಹೇಳಲಿಲ್ಲವಲ್ಲಾ.

ಶ್ರೀ ಎಂ. ರಘುಪತಿ.—ಒಂದು ತಿಂಗಳೊಳಗೆ ರಿಪೋರ್ಟ್ ಕೊಡುವ ಹಾಗೆ ಮಾಡುತ್ತೇನೆ. ಆನಂತರ ಆ ವರದಿ ಪ್ರಕಾರ ಯಾವ ಅಧಿಕಾರಿಗಳು ಈ ಅಕ್ರಮಗಳಿಗೆ ಜವಾಬ್ದಾರರೆಂದು ಕಂಡುಬರುತ್ತದೋ ಅಂಥಾ ಅಧಿಕಾರಿಗಳ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವೇದಾಂತ ಹೆಮ್ಮಿಗೆ.—ಬಳ್ಳಾರಿ ಜಿಲ್ಲೆಯಲ್ಲಿ ರಜೆ ಪ್ರಯಾಣ ರಿಯಾಯಿತಿ ಸೌಲಭ್ಯ ಪಡೆದಿರುವುದು ದುರುಪಯೋಗವಾಗಿದೆ ಎಂಬ ಬಗ್ಗೆ ಮಾನ್ಯ ರಾಮಪ್ಪನವರು ಪ್ರಶ್ನೆ ಕೇಳಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳೂ ಕೂಡ ಉತ್ತರ ಹೇಳಿದ್ದಾರೆ. ನಾನು ಕೇಳತಕ್ಕಂಥಾದ್ದು ಏನೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಈ ರೀತಿ ಹಣ ದುರುಪಯೋಗವಾಗದ ರೀತಿಯಲ್ಲಿ ವ್ಯವಸ್ಥಿತವಾದ ಯಾವುದಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ, ತೆಗೆದುಕೊಳ್ಳದಿದ್ದಿರೆ ಆ ಯೋಚನೆ ಆದು ಸರ್ಕಾರದ ಮುಂದೆ ಇದೆಯೇ ?

ಶ್ರೀ ಎಂ. ರಘುಪತಿ.—ಈ ರೀತಿ ಅವ್ಯವಹಾರಗಳು ಆಗುತ್ತಿವೆ ಎಂದು ಈಗ ನಮ್ಮ ಗಮನಕ್ಕೆ ಬಂದಿದೆ. ಬೀದರ್ ಜಿಲ್ಲೆಯಲ್ಲಿ ಅವ್ಯವಹಾರ ನಡೆದಾಗ ಮತ್ತು ಗುಬ್ಬರ್ಗ ಜಿಲ್ಲೆಯಲ್ಲಿ ಅವ್ಯವಹಾರ ನಡೆದಾಗ 7 ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ. ಆದೇ ರೀತಿಯಲ್ಲಿ ಇಲ್ಲೂ ಕೂಡ ಬೇಕಾದರೆ ವಿಜಲೆನ್ಸ್ ಸೆಲ್ ಮಾಡಿ ಅಂದರೆ ಅದನ್ನೂ ಮಾಡುವುದಕ್ಕೆ ಸಾಧ್ಯವೋ ಏನೋ ನೋಡುತ್ತೇನೆ.

ಶ್ರೀ ಎಂ. ರಾಮಪ್ಪ,—ಇದೇ ರೀತಿ ಶಿವಮೊಗ್ಗದಲ್ಲೂ ಕೂಡ ಇದೆ.

ಶ್ರೀ ಜಿ. ರಾಜೂಗೌಡ.—ರಜೆ ಪ್ರಯಾಣ ರಿಯಾಯಿತಿ ಸೌಲಭ್ಯದಲ್ಲಿ ಅನೇಕ ಭ್ರಷ್ಟಾಚಾರಗಳು ನಡೆದಿರುವುದರಿಂದ ಇದನ್ನು ಏಕೆ ರದ್ದುಪಡಿಸಬಾರದು ? ಪ್ರಯಾಣಕ್ಕೆ ಮೊದಲು ಮುಂಗಡ ಹಣ ಕೊಡುವುದರಲ್ಲೂ ಅವ್ಯವಹಾರವಾಗಿರುವುದರಿಂದ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು ಪೂರ್ಣ ಹಣ ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ? ಇದರಲ್ಲಿ ಇನ್ನೂ 5 ಲಕ್ಷ ರೂಪಾಯಿ ಬಟವಾಡೆ ಮಾಡಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಇಷ್ಟೊಂದು ಅವ್ಯವಹಾರ ನಡೆದಿರುವುದು ನೋಡಿದರೆ ಇಡೀ ಇಲಾಖೆ ಭ್ರಷ್ಟಾಚಾರಕ್ಕೆ ಒಳಪಟ್ಟಿದೆ ಎಂದು ಹೇಳುವುದರಲ್ಲಿ ಸತ್ಯವಿದೆ.

ಶ್ರೀ ಎಂ. ರಘುಪತಿ.—ಇಡೀ ಇಲಾಖೆ ಭ್ರಷ್ಟಾಚಾರಕ್ಕೆ ಒಳಪಟ್ಟಿದೆ ಎಂದು ಹೇಳುವುದು ಸಾಧುವಲ್ಲ. ಆದರೂ ಇದನ್ನು ರದ್ದುಮಾಡುವುದಕ್ಕೆ ಯೋಚನೆ ಇದೆಯೇ ಎಂದು ಅವರು ಕೇಳಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರದವರು ಒಂದು ಸಮಗ್ರವಾದ ನೀತಿಯನ್ನು ಆಳವಡಿಸಲಿದ್ದಾರೆ, ಇದನ್ನು ಅವರು ಆಳವಡಿಸಿ ರದ್ದುಪಡಿಸಬೇಕು ಎಂದು ಆಜ್ಞೆ ಮಾಡಿದರೆ ನಾವೂ ರದ್ದುಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮಂತ್ರಿಗಳು ಇಲಾಖೆಯಲ್ಲಿ ಉತ್ತಮರಾದವರು ಇದ್ದಾರೆ ಎಂದು ಹೇಳಿದರು. ಹಾಗಾದರೆ ಉತ್ತಮರಾದವರು ಎಷ್ಟು ಜನ ಇದ್ದಾರೆ ಉತ್ತಮರಾಗದೇ ಇರುವವರು ಎಷ್ಟು ಜನ ಇದ್ದಾರೆ ಎನ್ನುವುದರ ಬಗ್ಗೆ ಏನಾದರೂ ಮಾಹಿತಿ ಇದೆಯೇ, ಗ್ರೇಡೇಷನ್ ಪಟ್ಟಿ ಏನಾದರೂ ಇದ್ದರೆ ತಿಳಿಸಿದರೆ ಒಳ್ಳೆಯದು. ಏಕೆಂದರೆ ಇದು ಎಲ್ಲಾ ಕಡೆ ಇರುವ ಸಮಸ್ಯೆ. ಆದ್ದರಿಂದ ಉತ್ತಮರಾದ ಮಹಾನುಭಾವರು ಯಾರ್ಯಾರು ? ಉತ್ತಮರಾಗದೇ ಇರುವವರು ಯಾರು ಎಂದು ತಿಳಿಸಿದರೆ ಒಳ್ಳೆಯದು.

ಶ್ರೀ ರಘುಪತಿ.—ಉತ್ತಮರಾದವರನ್ನು ಬಿಟ್ಟರೆ, ಬಾಕಿಯವರು ಉತ್ತಮರಾದವರಲ್ಲ.

ಶ್ರೀ ಎಂ. ರಾಮಪ್ಪ.—ನೀವು ಬಹಳ ತೂಕವಾಗಿ ಹೇಳುತ್ತೀರಿ. ತೂಕದ ರಾಜಕೀಯ ಮಾಡುತ್ತಾ ಇರುವುದಲ್ಲ. ಆ ಕಡೆ ಕುಳಿತವರು ಮಾತಿನಲ್ಲಿ ಮೌಲ್ಯಾಧಾರ ಎಂದು ಹೇಳುತ್ತಾರೆ. ಮೌಲ್ಯ ಅಂದರೆ ರೊಕ್ಕ, ಆಧಾರ ಅಂದರೆ ಆಧಾರ, ಇದರ ಆಧಾರ ಏನು ಮತ್ತು ಅದು ಸರಿಯಾದ ರೀತಿಯಲ್ಲಿ ಹೇಳಿದರೆ

ನಮಗೆ ಅರ್ಥವಾಗುತ್ತದೆ. ನೀವು ತೂಕ ಮಾಡಿದಹಾಗೆ ಹೇಳಿದಿರಿ. ಮೌಲ್ಯಾಧಾರದಿಂದಲೇ ಹೇಳಿದ್ದೀರೋ ?

ಶ್ರೀ ಎಂ. ರಘುಪತಿ.—ನಾವು ಮೌಲ್ಯಾಧಾರ ರಾಜಕೀಯ ಇಟ್ಟುಕೊಂಡು ಯಾರು ಅಧಿಕಾರಿಗಳು ತಪ್ಪಿತಸ್ಥರಾಗಿರುತ್ತಾರೆ ಅವರಿಗೆ ರಕ್ಷಣೆ ಕೊಡುವುದಿಲ್ಲ, ಅವರಮೇಲೆ ಉಗ್ರ ಶಿಕ್ಷೆ ತೆಗೆದುಕೊಂಡೇ ತೆಗೆದು ಕೊಳ್ಳುತ್ತೇವೆ.

ವಿಷಯ : ರಾಜ್ಯದ ಜಿಲ್ಲಾಮಟ್ಟದ ಪ್ರಾಥಮಿಕ ಶಾಲಾ ಶಿಕ್ಷಕರ ಆಯ್ಕೆ ಬಗ್ಗೆ.

ಪ್ರ. ಸಂಖ್ಯೆ 41 (62) ಜ್ಞಾನದೇವ ದೊಡ್ಡ ಮೇಟಿ (ರೋಣ) .—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) 1985ರ ಸಾಲಿನಲ್ಲಿ, ರಾಜ್ಯದ ಜಿಲ್ಲಾಮಟ್ಟಗಳ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಸಮಿತಿಯ ಆಯ್ಕೆಗಳು ಪೂರ್ಣಗೊಂಡಿರುವುವೆ : ಜಿಲ್ಲಾವಾರು (ಮಾಹಿತಿಯನ್ನೊದಗಿಸುವುದು)

ಆ) ನೇಮಕಾತಿ ಸಮಿತಿಗಳು ಅನುಸರಿಸಿದ ಕ್ರಮಗಳೇನು :

ಇ) ಧಾರವಾಡ ಜಿಲ್ಲೆಯ ಪ್ರಾಥಮಿಕ ಶಾಲಾ ಶಿಕ್ಷಕರ ಆಯ್ಕೆ ಸರ್ಕಾರದ ಮಾರ್ಗದರ್ಶನದ ಪ್ರಕಾರ ಆಗಿದೆಯೇ ?

ಈ) ಆಯ್ಕೆ ಕಾಲಕ್ಕೆ ಆಯಾ ಜಿಲ್ಲೆಯವರಿಗೇ ಪ್ರಾಶಸ್ತ್ಯ ಕೊಟ್ಟಿರುವುದು ನಿಜವೇ ; (ಧಾರವಾಡ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನ ಆಯ್ಕೆಯಾದ ಅಭ್ಯರ್ಥಿಗಳಯಾದಿ ಪೂರೈಸುವುದು)

ಉ) ಧಾರವಾಡ ಜಿಲ್ಲೆಯ ನೇಮಕಾತಿ ಸಮಿತಿಯವರು ಆಯ್ಕೆ ಮಾಡಿರೊ ಜಿಲ್ಲೆಯ ಹೊರಗಿನ ಅಭ್ಯರ್ಥಿಗಳ ಸಂಖ್ಯೆ ಎಷ್ಟು ?

ಶ್ರೀ ಹೆಚ್.ಡಿ. ಗೋವಿಂದೇಗೌಡ.—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು.—

ಅ) ಹೌದು (ಬೀದರ್ ಜಿಲ್ಲೆಯನ್ನುಳಿದು) ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಿದೆ.

ಆ) 1983ರ ವಿಶೇಷ ನೇಮಕಾತಿ ನಿಯಮಗಳನ್ವಯ.

ಇ) ಹೌದು.

ಈ) ಇಲ್ಲ. ಧಾರವಾಡ ಜಿಲ್ಲೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ತಾಲ್ಲೂಕುವಾರು ಯಾದಿಯನ್ನು ಲಗತ್ತಿಸಲಾಗಿದೆ.

ಉ) 410.

NAMES OF THE CANDIDATES WHO HAVE BEEN SELECTED IN DLRC 1985 IN DHARWAR DISTRICT.

Hubli Taluk :

1	V G. Joshi	at Hubli
2	N G Naik	do
3	S S Vanjate	do
4	N R Kulkarni	do
5	C T Mannikeri	do
6	S R Baraker	do
7	R R Chilal	do
8	N S Shivalli	at Sulla
9	A C Mandakki	at Hubli
10	K V Kariyannavar	do
11	S F Kulkarni	do
12	A S Homare	do
13	L D Yadahalli	do
14	S L Kalli	do
15	S A Waryr	do
16	S S Naganur	do
17	A V Tolakal	do
18	R H Hosamani	Hebasur